ಈ) ಇದನ್ನು ಪರಿಶೀಲಿಸಲಾಗುವುದು. ಖಾಸಗಿಯವರು ಕೈಗಾರಿಕೆ ಸ್ಥಾಪಿಸಲು ಮುಂದೆ ಬಂದಲ್ಲಿ ರಾಜ್ಯ ಸರ್ಕಾರದ ಇತ್ತೀಚಿನ ಕೈಗಾರಿಕಾ ನೀತಿಯಂತೆ ಪ್ರೋತ್ಸಾಹ ಹಾಗೂ ಸಹಾಯ ಧನ ಒದಗಿಸಲಾಗುವುದು.

ಉ) ಸರ್ಕಾರದ ನೀತಿಯ ಪ್ರಕಾರ ಸ್ಥಾಪಿಸಲ್ಪಡುತ್ತಿರುವ ಕಾರ್ಖಾನೆಗಳಲ್ಲಿ ಶೇಕಡ 80 ರಿಂದ 100 ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ಒದಗಿಸಬೇಕಾಗುತ್ತದೆ.

ಊ) ಇದನ್ನು ಪರಿಶೀಲಿಸಲಾಗುವುದು.

ಹೊಸ ಕೈಗಾರಿಕಾ ನೀತಿ ಕುರಿತು

56 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರದವರು ಹೊಸ ಕೈಗಾರಿಕೆ ನೀತಿಯನ್ನು ಎಂದು ಪ್ರಕಟಿಸುವರು?*

ಆ) *ಈ ಕೈಗಾರಿಕಾ ನೀತಿಯಲ್ಲಿ ರೋಗ-ಗ್ರಸ್ಥ ಉದ್ಯಮಗಳನ್ನು ಪುನರುಜ್ಜೀವನಗೊಳಿಸುವುದು ಆದ್ಯತೆ ನೀಡಲಾಗುವುದೇ*

ಇ) *ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭಿಸಲಾಗುವ ಕೈಗಾರಿಕೆಗಳಿಗೆ ವಿಶೇಷ ರಿಯಾಯಿತಿ ಹಾಗೂ ನೆರವು ನೀಡಲಾಗುವುದೇ*

ಶ್ರೀ ಆರ್.ವಿ. ವೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಇಷ್ಟರಲ್ಲಿಯೇ ಪ್ರಕಟಿಸಲಾಗುವುದು

ಆ) ಈ ಬಗ್ಗೆ ಹೊಸ ಕೈಗಾರಿಕಾ ನೀತಿಯನ್ನು ಪ್ರಕಟಿಸುವಾಗ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ನಿಪ್ಪಾಣಿ ಕುಡಿಯುವ ನೀರಿನ ಯೋಜನೆ

57 - ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಸದಲಗಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಿಪ್ಪಾಣಿ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿ ನೀಡಿರುವುದು ಯಾವಾಗ? ಈ ಯೋಜನೆಗೆ ಎಷ್ಟು ಹಣ ಖರ್ಚಾಗುವುದು, ಈವರೆವಿಗೂ ಎಷ್ಟು ಹಣ ಖರ್ಚಾಗಿರುವುದು?*

ಆ) *ಈ ಕುಡಿಯುವ ನೀರಿನ ಯೋಜನೆ ಯಾವ ಹಂತದಲ್ಲಿ ಇದೆ?*

ಇ) *ಈ ಯೋಜನೆಗೆ ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಆ) ದಿನಾಂಕ 30.8.1990ರಲ್ಲಿ 110.00 ಲಕ್ಷ ರೂ.ಗಳ ಅಂದಾಜಿಗೆ ಮಂಜೂರಾತಿಗೆ ನೀಡಿದೆ.

ಈ ಯೋಜನೆ ಮುಕ್ತಾಯವಾಗಲು ಸುಮಾರು 250 ಲಕ್ಷ ರೂ.ಗಳ ಖರ್ಚಾಗುವುದು. ಜೂನ್ 95ರ ಅಂತ್ಯದವರೆಗೆ 120.01 ಲಕ್ಷ ರೂ.ಗಳು ಖರ್ಚಾಗಿದೆ.

ಆ) ಪಂಪು ಮನೆ ಮೇಲ್ಚಾವಣಿ ಕಾಂಕ್ರೀಟ್ ಕೆಲಸ ನಡೆದಿದೆ. ಪಂಪುಗಳನ್ನು ಜೋಡಿಸಿ ಚಾಲನೆ ಮಾಡಬೇಕಾಗಿದೆ. ಸ್ವಿಚ್‌ಗೇರ್ ರೂಂ ಕೆಲಸ ಪ್ರಗತಿಯಲ್ಲಿದೆ. 8.ಕಿ.ಮಿ. ಉದ್ದದ 450 ಮಿ.ಮಿ. ವ್ಯಾಸದ ಪಿ.ಎಸ್.ಸಿ. ಕೊಳವೆ ಮಾರ್ಗದ ಕೆಲಸ ಮುಗಿದಿದೆ. ಜಾಕವೆಲ್ ಹತ್ತಿರ 223 ಮೀಟರ್ ಉದ್ಯದ 450 ಮಿ.ಮಿ. ವ್ಯಾಸದ ಉಕ್ಕಿನ ಕೊಳವೆ ಕೆಲಸವು ಪ್ರಗತಿಯಲ್ಲಿದೆ ಜಲಶುದ್ಧೀಕರಣಾಗಾರದ ಕೆಲಸವು ಪ್ರಗತಿಯಲ್ಲಿದೆ.

ಇ) ಡಿಸೆಂಬರ್ 1995ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿ.

ಮಂಗಳೂರು ಬಂದರು ಮೂಲಕ ಗ್ರಾನೈಟ್ ರಫ್ತು.

58 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಿಂದ ಮಂಗಳೂರು ಬಂದರು ಮೂಲಕ ಎಷ್ಟೆಷ್ಟು ಗ್ರಾನೈಟ್ ರಫ್ತಾಗುತ್ತದೆ?

ಆ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸಿಗುವ ಆದಾಯವೆಷ್ಟು?

ಇ) ರಫ್ತು ಮಾಡುವ ಕಂಪನಿಗಳಾವುವು? ಎಷ್ಟು ಪ್ರಮಾಣದ ಗ್ರಾನೈಟನ್ನು ರಫ್ತು ಮಾಡಿದೆ?

ಈ) ಯಾವ ಯಾವ ದೇಶಕ್ಕೆ ಈ ರಫ್ತನ್ನು ಮಾಡಲಾಗಿದೆ. ಕಂಪನಿಯ ಪೂರ್ಣ ವಿಳಾಸ ಮತ್ತು ಪ್ರಮಾಣ ಮತ್ತು ಅಂದಾಜು ಮೊಬಲಗು ವಿವರಗಳನ್ನು ಒದಗಿಸುವುದು.

ಶ್ರೀ ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಮಂಗಳೂರು ಬಂದರಿನ ಮೂಲಕ ರಾಜ್ಯದ ಈ ಕೆಳಕಂಡ ಜಿಲ್ಲೆಗಳಿಂದ ಗ್ರಾನೈಟ್ ರಫ್ತು ಮಾಡಲಾಗುತ್ತಿದೆ. ಬೆಂಗಳೂರು, ಕೋಲಾರ, ಮೈಸೂರು, ತುಮಕೂರು, ರಾಯಚೂರು, ಹಾಸನ ಮತ್ತು ಬಿಜಾಪುರ. ರಫ್ತು ಮಾಡಲಾದ ಗ್ರಾನೈಟ್ 1994-95ನೇ ಸಾಲಿಗೆ 152726 ಘ.ಮೀ. ಆಗಿರುತ್ತದೆ.

ಆ) ಗ್ರಾನೈಟ್‌ನಿಂದ ಸರ್ಕಾರದ ಬೊಕ್ಕಸಕ್ಕೆ 1994-95ನೇ ಸಾಲಿಗೆ 2086.07 ಲಕ್ಷ ಗಳು ಆದಾಯ ಬಂದಿರುತ್ತದೆ.

ಇ) ಕಂಪನಿಗಳ ವಿವರಗಳನ್ನು ಅನುಬಂಧ (1)ರಲ್ಲಿ ನೀಡಲಾಗಿದೆ.